# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1054(1030)
2. ಸದಸ್ಯರ ಹೆಸರು : ಶ್ರೀ ಶರವಣ.ಟಿ.ಎ.,(ವಿಧಾನಸಭೆಯಿಂದ ಚುನಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 17.03.2025
4. ಉತ್ತರಿಸಬೇಕಾದ ಸಚಿವರು : ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೋವಿಡ್ ಕಾಲಘಟ್ಟದಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ನ್ಯಾಯಮೂರ್ತಿ ಮೈಕೆಲ್ ಡಿ ಕುನ್ಹಾ ನೀಡಿರುವ ವರದಿಯಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆ ಅಧಿಕಾರಿಗಳ ಕುರಿತು ನೀಡಿರುವ ಶಿಫಾರಸ್ಸುಗಳ ಪ್ರಕಾರ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಜಸ್ಟಿಸ್ ಮೈಕಲ್ ಡಿ. ಕುನ್ಹಾ ಅಧ್ಯಕ್ಷತೆಯ ವಿಚಾರಣಾ ಆಯೋಗವು, ಕೋವಿಡ್-19 ಸಾಂಕ್ರಾಮಿಕ ರೋಗದ ಸಮಯದಲ್ಲಿ ಸಾರ್ವಜನಿಕ ಹಣದ ದುರುಪಯೋಗ ಮತ್ತು ಅಧಿಕಾರ ದುರುಪಯೋಗವಾಗಿದೆ ಎನ್ನಲಾದ ಆರೋಪಗಳ ಕುರಿತಂತೆ ನೀಡಿರುವ ವರದಿಯ ಸಂಪುಟ 3 ಮತ್ತು ಸಂಪುಟ 5 ಕ್ರಮವಾಗಿ ವೈದ್ಯಕೀಯ ಶಿಕ್ಷಣ ಇಲಾಖೆಯ ಅಧೀನದ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಮತ್ತು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯಕ್ಕೆ ಸಂಬಂಧಿಸಿರುತ್ತದೆ.<br><br>ಜಸ್ಟಿಸ್ ಮೈಕಲ್ ಡಿ. ಕುನ್ಹಾ ವರದಿಯ ಸಂಪುಟ-5ರ ಆಧಾರದಲ್ಲಿ, ಕೋವಿಡ್-19 ಸಂದರ್ಭದಲ್ಲಿ ಅಗತ್ಯವಿದ್ದ, ಪಿಪಿಇ ಕಿಟ್ ಖರೀದಿಯಲ್ಲಿ ನಿಯಮಗಳನ್ನು ಉಲ್ಲಂಘಿಸಿರುವ ಸಂಬಂಧ 1) ಡಾ. ಪಿ.ಜಿ. ಗಿರೀಶ್, ಅಂದಿನ ನಿರ್ದೇಶಕರು(ನಿವೃತ್ತ), ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, 2) ಶ್ರೀ ರಘು ಜಿ.ಪಿ., ಆರ್ಥಿಕ ಸಲಹೆಗಾರರು(ಜಂಟಿ ನಿಯಂತ್ರಕರು), ರಾಜ್ಯ ಲೆಕ್ಕಪತ್ರ ಇಲಾಖೆ 3) ಶ್ರೀ ಮುನಿರಾಜು.ಎನ್., ಆರೋಗ್ಯ ಸಲಕರಣಾಧಿಕಾರಿ, ಆಕುಕ ಸೇವೆಗಳು ಹಾಗೂ ಸಂಬಂಧ ಪಟ್ಟ ಇತರೆ ಸಿಬ್ಬಂದಿ ವಿರುದ್ಧ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ವತಿಯಿಂದ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ದಿನಾಂಕ:13.12.2024 ರಂದು ದೂರು ನೀಡಲಾಗಿದ್ದು, ಪ್ರಥಮ ವರ್ತಮಾನ ವರದಿ (FIR) ದಾಖಲಾಗಿದ್ದು, ತನಿಖೆಯು ಪ್ರಗತಿಯಲ್ಲಿರುತ್ತದೆ.<br><br>ಜಸ್ಟಿಸ್ ಮೈಕಲ್ ಡಿ. ಕುನ್ಹಾ ವರದಿಯ ಸಂಪುಟ-3ರ ಆಧಾರದಲ್ಲಿ, RTPCR testing ನಲ್ಲಿ ಲೋಪದೋಷಗಳಾಗಿವೆ ಎನ್ನಲಾದ ಆರೋಪದ ಸಂಬಂಧ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಅಂದಿನ ನಿರ್ದೇಶಕರಾಗಿದ್ದ, ಡಾ.ಸಿ.ರಾಮಚಂದ್ರ, ಮತ್ತು ಡಾ. ಲೋಕೇಶ್, ನಿರ್ದೇಶಕರು(ಪ್ರಸುತ ಅಮಾನತ್ತು) ಇವರುಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ಅವರುಗಳಿಗೆ ನೋಟೀಸ್ |
| ಆ) | ಈ ವರದಿಯ ಅನುಸಾರ ತನಿಖೆ ಯಾವ ಹಂತದಲ್ಲಿದೆ; ಎಷ್ಟು ಮಂದಿ ವೈದ್ಯಕೀಯ ಶಿಕ್ಷಣ ಇಲಾಖೆ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ; (ಸಂಪೂರ್ಣ ವಿವರಗಳನ್ನು ನೀಡುವುದು). | |

| | | |
|---|---|---|
| | | ಜಾರಿಮಾಡಲಾಗಿದ್ದು, ಸಮಜಾಯಿಷಿ ಪಡೆಯಲು ಕ್ರಮವಹಿಸಲಾಗಿದೆ. ಸಮಜಾಯಿಷಿ ಪಡೆದು ನಿಯಮಾನುಸಾರ ಶಿಸ್ತು ಕ್ರಮಕ್ಕೆ ಕ್ರಮವಹಿಸಲಾಗುವುದು. |
| ಇ) | ಅಕ್ರಮಕ್ಕೆ ಕಾರಣವಾದ ಕೆಲವು ಕಂಪನಿಗಳನ್ನು ಕಪ್ಪು ಪಟ್ಟಿಗೆ ಸೇರಿಸಲು ಮತ್ತು ಅಕ್ರಮದ ಹಣವನ್ನು ವಸೂಲಿ ಮಾಡಲು ನ್ಯಾಯಮೂರ್ತಿ ಮೈಕೆಲ್ ಡಿ ಕುನ್ಹಾ ಶಿಫಾರಸ್ಸು ವರದಿಯನ್ವಯ ಕೈಗೊಂಡ ಕ್ರಮವೇನು?(ಸಂಪೂರ್ಣ ಮಾಹಿತಿ ನೀಡುವುದು). | ಜಸ್ಟೀಸ್ ಕುನ್ಹಾ ಆಯೋಗದ ವರದಿಯಲ್ಲಿ ಉಲ್ಲೇಖವಾಗಿರುವಂತೆ, ಸರಬರಾಜು ಸಂಸ್ಥೆಗಳಿಗೆ, ವಿಳಂಬ ಸರಬರಾಜಿಗಾಗಿ ದಂಡ ವಿಧಿಸುವ ಮತ್ತು ಹೆಚ್ಚುವರಿ ಪಾವತಿಯಾಗಿರುವಲ್ಲಿ, ಹೆಚ್ಚುವರಿ ಮೊತ್ತವನ್ನು ಆಯಾ ಸರಬರಾಜುದಾರ ಸಂಸ್ಥೆಗಳಿಂದ ವಸೂಲಾತಿ ಮಾಡುವ ಕ್ರಮವಾಗಿ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದಿಂದ 208 ಸರಬರಾಜು ಸಂಸ್ಥೆಗಳಿಗೆ ನೋಟೀಸನ್ನು ಜಾರಿ ಮಾಡಲಾಗಿದ್ದು, 125 ಪ್ರಕರಣಗಳಲ್ಲಿ ಸಮಜಾಯಿಷಿ ಸ್ವೀಕೃತವಾಗಿದ್ದು, ಅವುಗಳನ್ನು ಪರಿಶೀಲಿಸಿ ನಿಯಮಾನುಸಾರ ಅಗತ್ಯ ಕ್ರಮವಹಿಸಲಾಗುವುದು.<br><br>ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಗೆ ಸಂಬಂಧಿಸಿದಂತೆ ವೈದ್ಯಕೀಯ ಉಪಕರಣಗಳ ಸರಬರಾಜುದಾರರಿಂದ ರೂ.14,91,777/-ಗಳನ್ನು ಮತ್ತು ವೈದ್ಯಕೀಯ ಮತ್ತು ಔಷಧಿ ಸರಬರಾಜುದಾರರಿಂದ ರೂ.11,22,120/-ಗಳ ಮೊತ್ತವನ್ನು ಸಂಬಂಧ ಪಟ್ಟ ಸರಬರಾಜುದಾರರ ಬಿಲ್ಲುಗಳಿಂದ ಈಗಾಗಲೇ ಕಡತಗೊಳಿಸಲಾಗಿದೆ. ಬಾಕಿ ಉಳಿದಿರುವ ದಂಡ ಮೊತ್ತ ಕ್ರಮವಾಗಿ ರೂ.81,97,498/- ಮತ್ತು ರೂ.3,69,901/-ಗಳನ್ನು ಮುಂದಿನ ಬಿಲ್ಲುಗಳಲ್ಲಿ ಕಟಾಯಿಸುವ ಬಗ್ಗೆ ಸರಬರಾಜು ಸಂಸ್ಥೆಗಳಿಗೆ ಅಂತಿಮ ನೋಟೀಸ್ ನೀಡಿ ಕ್ರಮವಹಿಸಲಾಗುವುದು.<br><br>RT-PCR ನಡೆಸಿರುವ ಬೆಂಗಳೂರು ಮೆಡಿಕಲ್ ಸಿಸ್ಟಂ, ಬೆಂಗಳೂರು ಇವರ ವಿರುದ್ಧ ಕರ್ತವ್ಯ ಲೋಪ, ಸುಳ್ಳುಮಾಹಿತಿ, ಸಾರ್ವಜನಿಕ ಹಣ ದುರ್ಬಳಕೆ, ಆರೋಪಗಳ ಸಂಬಂಧ ಒಟ್ಟಾರೆ ರೂ.125,46,64,966/-ಗಳನ್ನು ಏಕೆ ವಸೂಲು ಮಾಡಬಾರದು ಎಂಬ ಬಗ್ಗೆ ಆ ಸಂಸ್ಥೆಗೆ ಕಿದ್ವಾಯಿ ಸಂಸ್ಥೆಯ ವತಿಯಿಂದ ಅಂತಿಮ ನೋಟಿಸ್ ನೀಡಲಾಗಿದೆ. ಸಮಜಾಯಿಷಿ ಸ್ವೀಕೃತವಾದ ನಂತರ ಪರಿಶೀಲಿಸಿ, ನಿಯಮಾನುಸಾರ ಕ್ರಮವಹಿಸಲಾಗುವುದು.<br><br>ಕಿದ್ವಾಯಿ ಸಂಸ್ಥೆಗೆ ಮಾನವ ಸಂಪನ್ಮೂಲ ಸರಬರಾಜು ಒದಗಿಸಿರುವ ಈ ಕೆಳಕಂಡ ಸಂಸ್ಥೆಗಳಾದ 1). M/s. Spoorthy Integrated Solutions Pvt. Ltd Bangalore - 560091,<br><br>2). M/s. Sharp Watch Investigation Security Services Pvt. Ltd, Mysore-570009,<br><br>3). M/s. Detectwell & Security Services Bangalore-560072, |

| | | |
|---|---|---|
| | | 4). M/s. Cosmopolitan Industrial Security & Detective Services Private Limited, Bangalore - 560 040.<br><br>ಸಂಸ್ಥೆಗಳು ಮಾಹೆವಾರು ಕ್ಲೈಮ್ ಮಾಡಿದ ಬಿಲ್ಲುಗಳಿಗೆ ಪೂರಕ 1) ಪಾವತಿ ಪುಸ್ತಕ(Payment register), 2)ಮೂಲ ಹಾಜರಾತಿ ಪುಸ್ತಕ 3)ವಿವರಾಣಾತ್ಮಕ ಪಟ್ಟಿ 4)ಕಾರ್ಯ ನಿರ್ವಹಣಾ ವರದಿ ದಾಖಲೆಗಳು ಕಡತದಲ್ಲಿ ನಿರ್ವಹಿಸದೇ ಇರುವ ಬಗ್ಗೆ ಎಲ್ಲಾ ಸಂಸ್ಥೆಗಳಿಗೆ ಕಿದ್ವಾಯಿ ಸಂಸ್ಥೆಯಿಂದ ನೋಟಿಸ್ ನೀಡಲಾಗಿದೆ.<br><br>ಕಿದ್ವಾಯಿ ಸಂಸ್ಥೆಯ ಆಡಳಿತ/ಸಿಬ್ಬಂದಿ ಶಾಖೆಗೆ ಸಂಬಂಧಿಸಿದಂತೆ ಅಧಿಕಾರಿ/ಸಿಬ್ಬಂದಿ ನೇಮಕಾತಿಯಲ್ಲಿ ನಿಯಮಗಳನ್ನು ಪಾಲಿಸದಿರುವುದು, ಸರ್ಕಾರದ ಅನುಮೋದನೆ ಪಡೆಯದೇ ಇರುವುದು, ಸೇವಾ ಹಿರಿತನ ಪಾಲಿಸದೇ ಮುಂಬಡ್ತಿ ನೀಡಿರುವುದರಲ್ಲಿ ಕಂಡುಬಂದಿರುವ ನ್ಯೂನ್ಯತೆಗಳ ಕುರಿತು ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿ ವಿರುದ್ಧ ಸಂಸ್ಥೆಯ ವತಿಯಿಂದ ನಿಯಮಾನುಸಾರ ಶಿಸ್ತು ಕ್ರಮ ವಹಿಸಲಾಗುವುದು. |

**ಸಂಖ್ಯೆ:** ಎಂಇಡಿ 218 ಎಂಪಿಎಸ್ 2025

**(ಡಾ: ಶರಣಪ್ರಕಾಶ ಆರ್. ಪಾಟೀಲ್)**
ವೈದ್ಯಕೀಯ ಶಿಕ್ಷಣ ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು